**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ**

| | |
|---|---|
| ಸಾಕ್ಷಿದಾರರ ಹೆಸರು | **ನಾರಾಯಣ** |
| ತಂದೆಯ ಹೆಸರು | **ಶ್ರೀರಾಮಪ್ಪ** |
| ವಯಸ್ಸು | **51 ವರ್ಷ** |
| ವೃತ್ತಿ | **ವ್ಯವಸಾಯ** |
| ವಾಸಸ್ಥಳ | **ಪುರ ಗ್ರಾಮ ಚನ್ನರಾಯಪಟ್ಟಣ** |
| ಪ್ರಮಾಣ ವಚನ ಬೋಧಿಸಿದ ದಿನಾಂಕಃ | **28.03.2026** |

**ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

1) ಸಾಕ್ಷಿಗೆ ಈಗಾಗಲೆ ನಿ.ಪಿ.2 ಎಂದು ಗುರುತಿಸಲ್ಪಟ್ಟಿರುವ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2 ವರ್ಷಗಳ ಹಿಂದೆ ಪುರ ಗ್ರಾಮದ 1ನೇ ಆರೋಪಿತರ ಮನೆಯು ಮುಂದೆ ಹೋಗುತ್ತಿದ್ದಾಗ ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ಸಮಯ ನನಗೆ ನೆನಪಿಲ್ಲ. ನಿ.ಪಿ.2ಕ್ಕೆ ನನ್ನ ಜೊತೆ ಚಾಸಾ–4ರವರು ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಪೋಟೋ ತೆಗೆದಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಕಡತದಲ್ಲಿರುವ 1 ಫೋಟೋವನ್ನು ನೋಡಿ ಮಹಜರ್ ಸಮಯದಲ್ಲಿ ತೆಗೆದ ಫೋಟೋ ಎಂದು ಗುರುತಿಸಿದ್ದು ಅದನ್ನು ನಿ.ಪಿ. 6 ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ವಾದ ಆಲಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

2) ಪೊಲೀಸರು ದಿಃ 02.01.2024ರಂದು 1ನೇ ಆರೋಪಿತರ ಮನೆಯ ಮುಂದೆ ಚಾಸಾ–1 ರವರು ನೀಡಿದ ದೂರಿನ ಮೇರೆಗೆ ಬೆಳಿಗ್ಗೆ 9 ರಿಂದ 10ಗಂಟೆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ನಿ.ಪಿ.6ರಂತೆ ಫೋಟೊ ತೆಗೆದಿದ್ದು ನಾನು ಆ ಸಮಯದಲ್ಲಿ ಹಾಜರಿದ್ದು ನಿ.ಪಿ.2ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದು, ಆ

ಸಮಯದಲ್ಲಿ ಫೋಟೋ ತೆಗೆದಿದ್ದರೂ ಆರೋಪಿಗಳಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ